ತುಂಗಾ ಮೇಲ್ದಂಡೆ ಯೋಜನೆಯ ರಟ್ಟೇಹಳ್ಳಿ ಉಪವಿಭಾಗ

1705 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯ ರಟ್ಟೇಹಳ್ಳಿ ಉಪವಿಭಾಗದಲ್ಲಿ ಕಾರ್ಯಾಲಯ ಇತರ ಕಟ್ಟಡ ಕಟ್ಟಿಡಲು ಜಮೀನನ್ನು ಸಮತಟ್ಟು ಮಾಡಲು ಖರ್ಚು ಮಾಡಿರುವ ಮೊತ್ತವೆಷ್ಟು? (ಪೂರ್ತಿ ಕೆಲಸದ ಹಾಗೂ ಖರ್ಚು ಮಾಡಿದ ವಿವರ ನೀಡುವುದು)

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :

ಅ) ತುಂಗಾ ಮೇಲ್ದಂಡೆ ಯೋಜನೆಯ ರಟ್ಟೇಹಳ್ಳಿ ಉಪವಿಭಾಗದಲ್ಲಿ ಕಾರ್ಯಾಲಯ ಇತರ ಕಟ್ಟಡ ಕಟ್ಟಲು ಜಮೀನನ್ನು ಸಮತಟ್ಟು ಮಾಡಲು ಈವರೆಗೆ ಖರ್ಚು ಮಾಡಿರುವ ಮೊತ್ತ ರೂ. 4,17,000-00

ಅನಧಿಕೃತ ಪಂಪ್ ಸೆಟ್ಟುಗಳು

1706 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ಅನಧಿಕೃತ ಪಂಪ್ ಸೆಟ್‌ಗಳನ್ನು ಸಕ್ರಮಗೊಳಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಹಾಕಿದ ನಿಯಮಗಳೇನು?

ಆ) ಆ ನಿಯಮಗಳ ಪ್ರಕಾರ ವರ್ಗವಾರು ತಾಲ್ಲೂಕುವಾರು ಸಕ್ರಮಗೊಳಿಸಿಕೊಂಡ ರೈತರ ಸಂಖ್ಯೆ ಎಷ್ಟು?

ಶ್ರೀ ಶರಣಪ್ಪ ಬಸಪ್ಪದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಅನಧಿಕೃತವಾಗಿ ವಿದ್ಯುತ್ ಬಳಸುತ್ತಿರುವ ಪಂಪ್‌ಸೆಟ್‌ಗಳನ್ನು ಅವುಗಳ ಗ್ರಾಹಕರು ಮಂಡಳಿಯ ನಿಯಮಾನುಸಾರ ಪಾಲಿಸಬೇಕಾದ ಕ್ರಮಗಳಿಗೆ ಅನುಸಾರವಾಗಿ ನಾಲ್ಕು ಪ್ರವರ್ಗಗಳಾಗಿ ವಿಂಗಡಿಸಿದೆ. ಆಯಾ ಪ್ರವರ್ಗಕ್ಕೆ ಅನುಸಾರವಾಗಿ ಸಂಬಂಧಿಸಿದ ಗ್ರಾಹಕರು ಮಂಡಳಿಗೆ ಪಾವತಿ ಮಾಡಬೇಕಾದ ಮೊಬಲಗನ್ನು (ಭದ್ರತಾ ಠೇವಣಿ, ಮಾಪಕ ಭದ್ರತಾ ಠೇವಣಿ, ದರದ ಹಾಗೂ ಸಕ್ರಮಗೊಳಿಸುವ ಖರ್ಚು) ನಿಗದಿಪಡಿಸಿದೆ. ಅನಧಿಕೃತ ಪಂಪ್‌ಸೆಟ್‌ಗಳ ಗ್ರಾಹಕರು ತಮ್ಮ ಪ್ರವರ್ಗಕ್ಕೆ ತಗಲುವ ಮೊತ್ತವನ್ನು ಮಂಡಳಿಗೆ ಪಾವತಿ ಮಾಡಿದಲ್ಲಿ ಅವರ ಪಂಪ್‌ಸೆಟನ್ನು " ಅಧಿಕೃತ " ಎಂದು ಪರಿಗಣಿಸಲಾಗುತ್ತದೆ. ಈ ಪ್ರವರ್ಗಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

ಆ) ಮಂಡಳಿಯ ನಿಯಮಗಳನ್ನು ಅನುಸರಿಸಿ ಇದುವರೆಗೆ (ದಿನಾಂಕ 24-7-1997ರ ವರೆಗೆ) ಒಟ್ಟು 17,809 ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿದೆ. ವರ್ಗವಾರು ವಿವರ ಈ ರೀತಿಯಿದೆ.

ಪ್ರವರ್ಗ - 1	6686	ಸಂಖ್ಯೆ
ಪ್ರವರ್ಗ - 2	4881	ಸಂಖ್ಯೆ
ಪ್ರವರ್ಗ - 3	5086	ಸಂಖ್ಯೆ
ಪ್ರವರ್ಗ - 4	1156	ಸಂಖ್ಯೆ

ಇದರ ತಾಲ್ಲೂಕುವಾರು ವಿವರಗಳು ತಕ್ಷಣ ಲಭ್ಯವಿರುವುದಿಲ್ಲ.

ಅನುಬಂಧ - 1

ಅನಧಿಕೃತ ನೀರಾವರಿ ಪಂಪುಸೆಟ್ಟುಗಳ - ವಿವಿಧ ಪ್ರವರ್ಗಗಳ ವ್ಯತ್ಯಾಸಗಳ ವಿವರಗಳು

ಕ್ರ.ಸಂ.	ವಿವರಗಳು	ಪ್ರವರ್ಗ-1	ಪ್ರವರ್ಗ-2	ಪ್ರವರ್ಗ-3	ಪ್ರವರ್ಗ-4
1	2	3	4	5	6
1.	ಅರ್ಜಿ ನೋಂದಾವಣೆ	ಅರ್ಜಿ ನೋಂದಾಯಿಸಲ್ಪಟ್ಟಿರುತ್ತದೆ	ಅರ್ಜಿ ನೋಂದಾಯಿಸಲ್ಪಟ್ಟಿರುತ್ತದೆ.	ಅರ್ಜಿ ನೋಂದಾವಣೆ ಯಾಗಿರುವುದಿಲ್ಲ.	ಅರ್ಜಿ ನೋಂದಾಯಿ-ಸಲ್ಪಟ್ಟಿರುತ್ತದೆ.
2.	ಠೇವಣಿ ಪಾವತಿ	ಠೇವಣಿ ಪಾವತಿಯಾಗಿರುತ್ತದೆ.	ಠೇವಣಿ ಪಾವತಿಯಾಗಿರುತ್ತದೆ.	ಠೇವಣಿ ಪಾವತಿಯಾಗಿರುವದಿಲ್ಲ.	ಠೇವಣಿ ಪಾವತಿಯಾಗಿರುತ್ತದೆ.
3.	ವಿದ್ಯುತ್ ಮಂಜೂರಾತಿ	ವಿದ್ಯುತ್ ಮಂಜೂರಾಗಿರುತ್ತದೆ.	ವಿದ್ಯುತ್ ಮಂಜೂರಾಗಿರುತ್ತದೆ.	ವಿದ್ಯುತ್ ಮಂಜೂರಾಗಿರುವುದಿಲ್ಲ	ವಿದ್ಯುತ್ ಮಂಜೂರಾಗಿರುತ್ತದೆ.
4.	ಕಾರ್ಯಾದೇಶ	ಕಾರ್ಯಾದೇಶ ನೀಡಿದೆ.	ಕಾರ್ಯಾದೇಶ ನೀಡಿದೆ.	ಕಾರ್ಯಾದೇಶ ನೀಡಿಲ್ಲ	ಕಾರ್ಯಾದೇಶ ನೀಡಿದೆ.
5.	ಮಂಡಳಿಯ ವತಿಯಿಂದ ಪೂರ್ಣ ಅಥವಾ ಭಾಗಶಃ ಸಾಮಾಗ್ರಿಗಳನ್ನು ನೀಡಿದ್ದು.	ಸಾಮಾಗ್ರಿಗಳನ್ನು ನೀಡಿದೆ ಪೂರ್ಣ : ಭಾಗಶಃ	ಸಾಮಗ್ರಿಗಳನ್ನು ನೀಡಿಲ್ಲ	ಸಾಮಗ್ರಿಗಳನ್ನು ನೀಡಿಲ್ಲ.	ಸಾಮಗ್ರಿಗಳ ಅವಶ್ಯಕತೆ ಇಲ್ಲ. (ಸರ್ವೀಸ್ ಮೈನ್ ಮಾತ್ರ)
6.	ಅರ್ಜಿದಾರರೇ ಸಂಪರ್ಕವನ್ನು ಅನಧಿಕೃತವಾಗಿ ನೀಡಿದ್ದಾರೆಯೇ.	ಅನಧಿಕೃತವಾಗಿ ನೀಡಿದ್ದಾರೆ.	ಅನಧಿಕೃತವಾಗಿ ನೀಡಿದ್ದಾರೆ	ಅನಧಿಕೃತವಾಗಿ ನೀಡಿದ್ದಾರೆ	ಅನಧಿಕೃತವಾಗಿ ನೀಡಿದ್ದಾರೆ.
7.	ಪಾವತಿಸುವ ವೆಚ್ಚ	1. - 2. ರೂ. 300 ಪ್ರತಿ ಅಶ್ವಶಕ್ತಿಗೆ	1) ರೂ. 5000 ಇತರರಿಗೆ ರೂ.2500-00 ಪ.ಜಾ : ಪ.ವ.	1) ರೂ.10,000 ಇತರರಿಗೆ 2) ರೂ. 5000-00 ಪ.ಜಾ : ಪ.ವ. ರೂ.300-00 ಅಶ್ವ ಶಕ್ತಿಗೆ	1) ರೂ.2500-00 ಇತರರಿಗೆ ರೂ. 125-00 ಪ.ಜಾ: ಪ.ವ. 2) ರೂ.300-00 ಅಶ್ವ ಶಕ್ತಿಗೆ

1	2	3	4	5	6
		3.	2) ರೂ.300-00 ಅಶ್ವ ಶಕ್ತಿಗೆ (ರೂ. 960-002)	3) ರೂ. 960-00 ಮೀ.ಭ.ಠೇ.	3) ಮೀ.ಭ.ಠೇರೂ. 960

ಸೂಚಿ : 1) ಶುಲ್ಕ ಪಾವತಿ

2) ಪ್ರತಿ ಅಶ್ವ ಶಕ್ತಿಗೆ ಠೇವಣಿ

3) ಮೀ.ಭ.ಠೇ. - ಮೀಟರ್ ಭದ್ರತಾ ಠೇವಣಿ.